## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತಿ.ನರಸೀಪುರ

## ಸಿ.ಸಿ.621/2023

| | | | | |
|---|---|---|---|---|
| 01 | ಹೆಸರು | ಲೋಲಾಕ್ಷಿ ಟಿ ಎಸ್ | ಸಿ ಡಬ್ಲೂ | **17** |
| 02 | ಗಂಡನ ಹೆಸರು | ಶ್ರೀನಿವಾಸ್ ಯಾದವ್ | ಪಿ ಡಬ್ಲೂ | 5 |
| 03 | ವಯಸ್ಸು | 44 | ಪ್ರಮಾಣೀಕರಿಸಲಾದ ದಿನಾಂಕಃ | |
| 04 | ಉದ್ಯೋಗ | ಪಿ ಐ | 07.04.2026 | |
| 05 | ಊರು | ಮೈಸೂರು | | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು ದಿಃ20.07.2022 ರಿಂದ 08.08.2023 ರವರೆಗೆ ಬನ್ನೂರು ಪೊಲೀಸ್ ಠಾಣೆಯಲ್ಲಿ ಪಿ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ01.06.2023 ರಂದು ಚಾ ಸಾ 16 ರವರಿಂದ ಮುಂದಿನ ತನಿಖೆಗಾಗಿ ನಾನು ಈ ಪ್ರಕರಣದ ಕಡತವನ್ನು ಪಡೆದುಕೊಂಡಿರುತ್ತೇನೆ. ಕಡತವನ್ನು ಪರಿಶೀಲಿಸಿ ಅದೇ ದಿನ ಸಂಜೆ 4.00 ರಿಂದ 4.30 ರವರೆಗೂ ಚಾ ಸಾ 12 ರವರು ಠಾಣೆಯಲ್ಲಿ ಹಾಜರು ಪಡಿಸಿದ ನೋಂದಣಿ ಸಂ. ಕೆ ಎ 11 ಇ ಯು 8000 ಉಳ್ಳ ಹೋಂಡಾ ಆಕ್ಟೀವಾ ವಾಹನದ ಅಮಾನತ್ತು ಮಹಜರು ಕ್ರಮವನ್ನು ಚಾ ಸಾ 8 ಮತ್ತು 9 ರವರ ಸಮಕ್ಷಮ ಜರುಗಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ನಮ್ಮ ಠಾಣಾ ಮಾಲುಪಟ್ಟಿ ಸಂಖ್ಯೆ 155/2023 ರಂತೆ ದಾಖಲಿಸಿಕೊಂಡು ಘನ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ದಿಃ02.06.2023 ರಂದು ಚಾ ಸಾ 13 ರವರಿಂದ ಐ ಎಂ ವಿ ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ವಾಹನದ ಮಾಲಿಕರಾದ ಚಾ ಸಾ 9 ರವರಿಗೆ ಎಂ ವಿ ಕಾಯ್ದೆ ಯ ಕಲಂ 133 ರೀತ್ಯಾ ನೋಟಿಸ್ ಜಾರಿಗೊಳಿಸಿ ಉತ್ತರವನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಆರೋಪಿತನಿಗೆ ಸಿ ಆರ್ ಪಿ ಸಿ ಕಲಂ 41 ಎ ರೀತ್ಯಾ ನೋಟಿಸ್ ಜಾರಿಗೊಳಿಸಿರುತ್ತೇನೆ. ದಿಃ03.06.2023 ರಂದು ವಾಹನಮಾಲಿಕರಿಂದ ಇಂಡೆಮ್ನಿಟಿ ಬಾಂಡ್ ಪಡೆದು ವಾಹವನ್ನು ಅವರ ವಶಕ್ಕೆ ನೀಡಿರುತ್ತೇನೆ.

ದಿಃ01.08.2023 ರಂದು ಚಾ ಸಾ 2 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ತನಿಖೆ ಪೂರ್ಣಗೊಂಡ ನಂತರ ಆರೋಪಿತನ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ.

ಸಾಕ್ಷಿಯು ಅಮಾನತ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 9 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿ ಪಿ 9(ಎ) ಎಂದು ಗುರುತಿಸಲಾಯಿತು. ನೋಟಿಸ್ ಅನ್ನು ನೋಡಿ ಸಾಕ್ಷಿ ಗುರುತಿಸಿದ್ದು ಅದನ್ನು ನಿ ಪಿ 10 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿ ಪಿ 10(ಎ) ಎಂದು ಗುರುತಿಸಲಾಯಿತು. ಉತ್ತರನೋಟಿಸ್ ಅನ್ನು ನೋಡಿ ಸಾಕ್ಷಿ ಗುರುತಿಸಿದ್ದು ಅದನ್ನು ನಿ ಪಿ 11 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿ ಪಿ 11(ಎ) ಎಂದು ಗುರುತಿಸಲಾಯಿತು. ಇಂಡೆಮ್ನಿಟಿ ಬಾಂಡ್ ಅನ್ನು ನೋಡಿ ಸಾಕ್ಷಿ ಗುರುತಿಸಿದ್ದು ಅದನ್ನು ನಿ ಪಿ 12 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿ ಪಿ 12(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ ಎಸ್ ವಕೀಲರಿಂದಃ**

ನಾನು ಕಡತವನ್ನು ಪಡೆದ ನಂತರ ಘಟನಾ ಸ್ಥಳಕ್ಕೆ ಭೇಟಿ ನೀಡಿರುವುದಿಲ್ಲ. ನಿ ಪಿ 8 ರಂತೆ ದೂರು ಕೊಟ್ಟಿರುವಂತಹ ದೂರುದಾರರನ್ನು ಕಣ್ತಪ್ಪಿನಿಂದ ಸಾಕ್ಷಿದಾರರಾಗಿ ಮಾಡಿರುವುದಿಲ್ಲ. ನಾನು ಯಾವುದೇ ಎಂ ವಿ ಎ ವರದಿಯನ್ನು ಪಡೆದುಕೊಂಡಿರುವುದಿಲ್ಲ ಮತ್ತು ಯಾವುದೇ ಅಮಾನತ್ತು ಮಹಜರನ್ನು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಾನು ಚಾ ಸಾ 2 ರವರ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದಿದ್ದರೂ ಕೂಡಾ ಆರೋಪಿಯ ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಾಗಿದೆ.

(ಸಚಿನ್ ಹೆಚ್ . ಆರ್.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ತಿ.ನರಸೀಪುರ.